# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 4213/2022

ಪಿರ್ಯಾದುದಾರರು ಃ ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು ಃ ಪ್ರದೀಪ್ ಕುಮಾರ್**

**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | **ನಾಗರತ್ನ** |
| ತಂದೆಯ / ಗಂಡನ ಹೆಸರು | **ಪುಟ್ಟರಾಜು** |
| ವಯಸ್ಸು | **27** |
| ಉದ್ಯೋಗ | **ಗೃಹಿಣಿ** |
| ವಿಳಾಸ | **ಚೌಡಿಬೇಗೂರು** |

**ದಿನಾಂಕಃ 1-02-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಆರೋಪಿಗೆ ನನಗೆ ಗೊತ್ತು. ಆರೋಪಿಗೆ ನಾನು ಒಂದುವರೆ ವರ್ಷದ ಹಿಂದೆ ಒಂದುವರೆ ಲಕ್ಷ ಹಣ ಹಾಗೂ ಒಟ್ಟು 140 ಗ್ರಾಂ ಒಡವೆಯನ್ನು ನೀಡಿರುತ್ತೇನೆ. ಆರೋಪಿ ಅದನ್ನು ನನಗೆ ಹಿಂದಿರುಗಿಸದೇ ಎಲ್ಲಿಯೋ ಹೊರಟು ಹೋಗಿರುತ್ತಾರೆ. ಸದರಿ ವಿಚಾರವಾಗಿ ನಾನು ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ದೂರು ಆಗಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ದೂರಿನ ಆಧಾರದ ಮೇಲೆ ಪೋಲೀಸರು ನಮ್ಮ ಊರಿಗೆ ಬಂದು ನಾನು ಒಡವೆ ನೀಡಿದ ಸ್ಥಳ ಹಾಗೂ ಆರೋಪಿಯ ಮನೆಯನ್ನು ಪರಿಶೀಲನೆ ಮಾಡಿ, ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿ.06-04-2022 ರಂದು 7 ರಿಂದ 7.45 ರ ಸಮಯದಲ್ಲಿ ನನ್ನ ಹಾಗೂ ಚಾಸಾ-2 ಮತ್ತು 3 ರವರ ಸಮಕ್ಷಮ ಸಹಿಯನ್ನು ಪಡೆದುಕೊಂಡಿರುತ್ತಾರೆ. ದಿ.22-04-2022 ರಂದು ಬೆಳಗ್ಗೆ 7 ಗಂಟೆಯಿಂದ 7.40 ರ ಸಮಯದಲ್ಲಿ ನನ್ನ ಹಾಗೂ ಚಾಸಾ-2 ಮತ್ತು 3 ರವರ ಸಮಕ್ಷಮ ಬಿಡುಗಡೆ ಮಹಜರ್ ನ್ನು ಜರುಗಿಸಿ, ಸದರಿ ದಾಖಲಾತಿ ಬಿಡುಗಡೆ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗ ತಾವು ಬಿಡುಗಡೆ ಸಮಯದಲ್ಲಿ ತೆಗೆಸಿದಂತಹ ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿದ್ದು, ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ನಾನು ಹಣ ಮತ್ತು ಒಡವೆಗಳನ್ನು ನೋಡಿರುವ ವ್ಯಕ್ತಿ ಆರೋಪಿಯೇ ಎಂದು ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಭಾಗಶಃ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಆರೋಪಿ ನಿಮ್ಮ ಜೊತೆ ಸಲೀಗೆಯಿಂದ ಇದ್ದರು ಎಂದರೆ ಸರಿ. ಆ ರೀತಿ ಸಲೀಗೆಯಿಂದ ಇದ್ದುದ್ದನ್ನು ನಿಮ್ಮ ಗಂಡನಿಗೆ ಹೇಳುತ್ತೇನೆ ಎಂದು ಆರೋಪಿ ಹೆದರಿಸಿರುತ್ತಾರೆ ಎಂದರೆ ಸರಿ. ನಿಮ್ಮನ್ನು ಈ ರೀತಿ ಎದರಿಸಿ ನಿಮ್ಮ ಮನೆಯಿಂದ ಹಣ

ತರಿಸುತ್ತಿದ್ದರು ಎಂದರೆ ಸರಿ. ನೀವು ಆರೋಪಿಗೆ 20.5 ಗ್ರಾಂ. ಚಿನ್ನದ ನೆಕ್ಲೆಸ್, ಒಂದು ಚಿನ್ನದ ಮಾಂಗಲ್ಯ ಸರ, ಒಂದು ಚಿನ್ನದ ಕಿವಿ ಓಲೆ ಒಟ್ಟು 48.400 ಗ್ರಾಂ. ಒಂದು ಚಿನ್ನದ ಸರ, ಒಂದು ಜೊತೆ ಕಿವಿಯ ಓಲೆ ಒಟ್ಟು 35.300 ಗ್ರಾಂ. ಮತ್ತು ಮಕ್ಕಳು ಚಿಕ್ಕ ಚಿನ್ನದ ರಿಂಗ್ ಮತ್ತು ಚಿನ್ನದ ಕಿವಿ ಗುಂಡು ಒಟ್ಟು 6.800 ಗ್ರಾಂ. ಅವಲಕ್ಕಿ ಚಿನ್ನದ ಸರ 30 ಗ್ರಾಂ. ಒಟ್ಟು 145 ಗ್ರಾಂ. ತೂಕದ ಚಿನ್ನದ ಒಡವೆಗಳನ್ನು ನಿಮ್ಮನ್ನು ಬೆದರಿಸಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಈ ಮೇಲೆ ಹೇಳಿದ ಒಡವೆಗಳನ್ನು ನಿಮ್ಮ ತಂದೆ ಚಾಸಾ-6 ರಾಜಣ್ಣನವರ ಹೆಸರಿನಲ್ಲಿ ಇತ್ತು ಎಂದು ತಿಳಿಸಿರುತ್ತೀರಿ ಎಂದರೆ ಸರಿ. ಈ ವಿಚಾರವಾಗಿ ಮನೆಯಲ್ಲಿ ವಿಚಾರ ಮಾಡಿಕೊಂಡು ಈ ದಿನ ತಡವಾಗಿ ಬಂದು ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಅದೇ ದಿನ ಪೋಲೀಸರು ನಿಮ್ಮ ಮನೆಯ ಬಳಿ ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನೀವು ಚಾಸಾ-2 ಮತ್ತು 3 ರವರು ಸಹಿ ಮಾಡಿರುತ್ತೀರಿ ಎಂದರೆ ಸರಿ. ಈ ವಿಚಾರವಾಗಿ ದಿ.24-02-2022 ರಂದು ಪೋಲೀಸರು ನಿಮ್ಮನ್ನು ಕುದೂರು ಠಾಣೆಗೆ ಕರೆಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಕಂಡ ಒಡವೆಗಳನು ಬಿಡಿಸಿಕೊಳ್ಳಲು ಪೋಲೀಸರು ನಿಮ್ಮನ್ನು ಸಾಕ್ಷಿಯಾಗಿ ಇರಬೇಕು ಎಂದು ಹೇಳಿದ್ದು ನೀವು ಸದರಿ ನಿಪಿ-3 ಬಿಡುಗಡೆ ಮಹಜರ್ ಗೆ ಸಹಿ ಮಾಡಿರುತ್ತೀರಿ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಚಾಸಾ-9 ಮತ್ತು 10 ರವರೂ ಸಹ ಸಹಿ ಮಾಡಿರುತ್ತೇವೆ ಎಂದರೆ ಸರಿ. ನಿಪಿ-3 ಬಿಡುಗಡೆ ಮಹಜರ್ ನ್ನು ಮಧ್ಯಾಹ್ನ 12.40 ರಿಂದ 1.30 ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು :- ಶ್ರೀ. ಎಂ. ಎಂ. ವಕೀಲರಿಂದ ಆರೋಪಿಗಳ ಪರವಾಗಿ :-**

ದೂರನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಠಾಣೆಯಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಎಸ್,ಎಸ್.ಎಲ್.ಸಿ ಯವರೆಗೂ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನೀವು ದೂರನ್ನು ಲಿಖಿತ ರೂಪದಲ್ಲಿ ನೀಡಿರುತ್ತೀರಾ ಎಂದರೆ ಹೌದು ಎಂದು

ನುಡಿಯುತ್ತಾರೆ. ದೂರು ನೀಡುವಾಗ ಯಾರು ಯಾರು ಹೋಗಿರುತ್ತೀರಿ ಎಂದರೆ ನನ್ನ ಗಂಡ, ಊರಿನ ಅಧ್ಯಕ್ಷರು, ನಮ್ಮ ಪಕ್ಕದ ಮನೆಯವರಾದ ಚಾಸಾ-2, ನಾಗಣ್ಣ, ನನ್ನ ಮಾವ ಹಾಗೂ ಅಣ್ಣ ತಮ್ಮಂದಿರು ಬಂದಿರುತ್ತಾರೆ. ಚಾಸಾ-3 ರಿಂದ 10 ರವರು ಬಂದಿರುತ್ತಾರೆ. ನೀವು ದೂರು ನೀಡುವ ಸಮಯದಲ್ಲಿ ಚಾಸಾ-2 ರಿಂದ 10 ರವರ ಸಹಿಗಳನ್ನು ಪೋ. ಠಾಣೆಯಲ್ಲಿ ಪಡೆದುಕೊಂಡಿರುತ್ತಾರ ಎಂದರೆ ಹೌದು ಎಂದು ನುಡಿಯುತ್ತಾರೆ. ಚಾಸಾ-2 ನನ್ನ ಮಾವ, ಚಾಸಾ-3 ನನ್ನ ಅಣ್ಣ, ಚಾಸಾ-6 ನನ್ನ ಮಾವ, ಚಾಸಾ-9 ನನ್ನ ಮೈದುನಾ, ನಿಮ್ಮ ಗ್ರಾಮದಲ್ಲಿ ಸುಮಾರು 60 ರಿಂದ 70 ಮನೆಗಳು ಇರುತ್ತದಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಹಣವನ್ನು ಯಾವ ಯಾವ ದಿನಾಂಕದಂದು ನೀಡಿರುತ್ತೀರಿ ಎಂದರೆ ನನಗೆ ದಿನಾಂಕ ನೆನಪಿಲ್ಲ ಆದರೆ 3 ಕಂತುಗಳಲ್ಲಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು 2022 ರಲ್ಲಿ ಹಣವನ್ನು ನೀಡಿರುತ್ತೇನೆ. ಒಂದು ಬಾರಿ 50 ಸಾವಿರ ಚೆಕ್ಕನ್ನು ನೀಡಿರುತ್ತೇನೆ. ಮತ್ತೊಂದು ಬಾರಿ 40 ಸಾವಿರ ನೀಡಿರುತ್ತೇನೆ. ಮತ್ತೊಮ್ಮೆ 60 ಸಾವಿರ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹುಲಿಕಲ್ ಬ್ರಾಂಚ್ ಎಸ್. ಬಿ. ಎಂ ಬ್ಯಾಂಕ್ ನ ಖಾತೆಯಿಂದ ಹಣವನ್ನು ನೀಡಿರುತ್ತೇನೆ. ನಾನು 2021 ಮತ್ತು 2022 ರಲ್ಲಿ ಹಣವನ್ನು ನೀಡಿರುತ್ತೇನೆ. ನೀವು ಮೂರು ಕಂತಿನಲ್ಲಿ ಹಣ ನೀಡಿರುತ್ತೇನೆ ಎಂದು ಬರವಣಿಗೆಯಲ್ಲಿ ದೂರು ನೀಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಯಾವ ಯಾವ ದಿನಾಂಕದಂದು ಯಾವ ಯಾವ ಒಡವೆಗಳನ್ನು ನೀಡಿರುತ್ತೀರಿ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಗಂಡ ಹಾಗೂ ಅವರ ಕುಟುಂಬದವರು ಅಡಕೆ ವ್ಯಾಪಾರ ಮಾಡುತ್ತಿರಿ ಎಂದರೆ ಸರಿ. ಆರೋಪಿ ಸಹ ನಿಮ್ಮ ಗಂಡನ ಜೊತೆ ಸೇರಿಕೊಂಡು ಅಡಿಕೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯವರ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ನಿಮ್ಮ ಕುಟುಂಬದವರು ಆರೋಪಿಯ ಅಡಿಕೆ ತೋಟದಿಂದ ಬಂದಂತಹ ಅಡಿಕೆಯನ್ನು ಪಡೆದುಕೊಂಡು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನಗೆ ಸುಮಾರು 10 ವರ್ಷಗಳಿಂದ ಪರಿಚಯ. ನನಗೆ ಈಗ 27 ವರ್ಷ ವಯಸ್ಸು. ನನ್ನ ಸ್ವಂತ ಊರು ಮಂದಾನಿ ಪಾಳ್ಯ. ಚೌಡಿ

ಬೇಗೂರು ಪಾಳ್ಯದಿಂದ ಮಂದಾನಿ ಪಾಳ್ಯಕ್ಕೆ ಎಷ್ಟು ಅಂತರವಿದೆ ಎಂದರೆ ಸುಮಾರು 15 ಕಿ. ಮೀ ಅಂತರವಿರುತ್ತದೆ ಎಂದು ನುಡಿಯುತ್ತಾರೆ. ನೀವು ಮದುವೆ ಆಗಿ ಎಷ್ಟು ವರ್ಷ ಆಗಿರುತ್ತದೆ ಎಂದರೆ ನಾನು 18 ವರ್ಷ ಇದ್ದಾಗ ಮದುವೆ ಆಗಿರುತ್ತದೆ. ಎಂದು ನುಡಿಯುತ್ತಾರೆ. ಆರೋಪಿ ನಿಮ್ಮ ಜೊತೆ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸರಿ. ನಿಮ್ಮ ಸಂಬಂಧಿಕರೆಲ್ಲಾ ಅಕ್ಕಪಕ್ಕದಲ್ಲಿ ವಾಸವಿದ್ದಾರೆ ಎಂದರೆ ಸರಿ. ಆರೋಪಿ ನಿಮ್ಮ ಜೊತೆ ಸಲೀಗೆಯಿಂದ ಇದ್ದು ದ್ದನ್ನು ನಿಮ್ಮ ಸಂಬಂಧಿಕರಿಗೆ ಹೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಸಹ ನೀವು ಲಿಖಿತವಾಗಿ ದೂರನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನೀಡಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿ ಯಾವ ಯಾವ ದಿನ ಬೆದರಿಕೆಯನ್ನು ಹಾಕಿದರು ಎಂದು ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ತಿಂಗಳು ಮತ್ತು ವರ್ಷ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ 2022 ರಲ್ಲಿ ಬೆದರಿಕೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ತಿಂಗಳು ಮತ್ತು ದಿನಾಂಕ ಗೊತ್ತಿಲ್ಲ ಎಂದರೆ ಸರಿ. ನಿಮ್ಮ ಹಾಗೂ ಆರೋಪಿಯ ಕುಟುಂಬದವರ ನಡುವೆ ಹಣಕಾಸಿನ ವ್ಯವಹಾರ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಬಂದಿರುವ ಪೋಲೀಸರ ಹೆಸರನ್ನು ಹೇಳಲು ಆಗುತ್ತದೆಯಾ ಎಂದರೆ ಇಬ್ಬರು ಬಂದಿದ್ದರು ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಹಜರ್ ಕಾಲದಲ್ಲಿ ಸುಮಾರು ಎಷ್ಟು ಜನರು ಇದ್ದರು ಎಂದರೆ 10 ರಿಂದ 15 ಜನ ಇದ್ದರು ಎಂದು ನುಡಿಯುತ್ತಾರೆ. ಅವರುಗಳೆಂದರೆ ಚಾಸಾ-2, 3, ಆಂಜನಪ್ಪ ಚಾಸಾ-4 ಹನುಮಂತಯ್ಯ ಇದ್ದರು. ನಿಮ್ಮ ಕುಟುಂಬದವರನ್ನು ಬಿಟ್ಟು ಬೇರೆಯವರು ಯಾರು ಇದ್ದರು ಎಂದರೆ ನಮ್ಮ ಅಕ್ಕಪಕ್ಕದ ಮನೆಯವರು ಇದ್ದರು ಎಂದು ನುಡಿಯುತ್ತಾರೆ. ಅವರ ಹೆಸರುಗಳು ಹೇಳಲು ಆಗುವುದಿಲ್ಲ. ಪೋಲೀಸರು ನಿಮ್ಮ ಅಕ್ಕಪಕ್ಕದ ಮನೆಯವರ ಸಹಿಯನ್ನು ಪಡೆದುಕೊಂಡರಾ ಎಂದರೆ ಹೌದು ನುಡಿಯುತ್ತಾರೆ. ಒಡವೆಗಳು ನಿಮ್ಮ ತಂದೆಯ ಹೆಸರಿನಲ್ಲಿ ಇದೆ ಎಂದು ಹೇಳಿದ್ದು, ನಿಮ್ಮ ತಂದೆಯವರು ಯಾವ ಅಂಗಡಿಯಿಂದ ಸದರಿ ಒಡವೆಗಳನ್ನು ತಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಿಕ್ಕಮಕ್ಕಳ ರಿಂಗ್ ಮತ್ತು ಗುಂಡು ಇತ್ತು ಎಂದು

ಹೇಳಿದ್ದು, ಸದರಿ ಒಡವೆಗಳನ್ನು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತೀರಿ ಎಂದರೆ 2017 ರಲ್ಲಿ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಒಡವೆಯನ್ನು ಯಾರು ಖರೀದಿ ಮಾಡಿರುತ್ತಾರೆ ಎಂದರೆ ನನ್ನ ತಾಯಿ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಇನ್ನೂ ಉಳಿದ ಒಡವೆಗಳನ್ನು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತೀರಿ ಎಂದರೆ ನನ್ನ ಮದುವೆ ಆದ ನಂತರ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ದೂರಿನಲ್ಲಿ ಯಾವ ಯಾವ ಡಿಸೈನ್ ಒಡವೆಗಳು ಎಂದು ಲಿಖಿತವಾಗಿ ಬರೆಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಒಡವೆಗಳನ್ನು ಬಿಡಿಸಿಕೊಳ್ಳಲು ಯಾರು ಹಣ ಪಾವತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ಸ್ಥಳ ಮಹಜರ್ ಹಾಗೂ ಬಿಡುಗಡೆ ಮಹಜರ್ ನಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದರೆ ಅವರು ಯಾವ ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಿಮ್ಮ ಗಂಡನ ಜೊತೆ ಅಡಿಕೆಯನ್ನು ತರುವುದು ಹಾಗೂ ಎಲ್ಲಾ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆ ಎಂದರೆ 7 ಜನ ಇದ್ದೇವೆ ಎಂದು ನುಡಿಯುತ್ತಾರೆ. ನಾನು ನನ್ನ ಗಂಡ ಮಗ, ಮಗಳು, ತಾತ ಇರುತ್ತೇವೆ ಎಂದು ನುಡಿಯುತ್ತಾರೆ. ಸದರಿ ತಾತನಿಗೆ ಎಷ್ಟು ವರ್ಷ ಎಂದರೆ 70 ವರ್ಷ ಎಂದು ನುಡಿಯುತ್ತಾರೆ. ತಾತನವರು ಯಾವುದೇ ಕೆಲಸ ಕಾರ್ಯಗಳಿಗೆ ಹೋಗುವುದಿಲ್ಲ ಎಂದರೆ ಸರಿ. ಅವರು ಯಾವಾಗಲೂ ಮನೆಯಲ್ಲಿಯೇ ಇರುತ್ತಾರೆ ಎಂದರೆ ಸರಿ. ನಿಮ್ಮ ಗಂಡನ ಸಂಬಂಧಿಕರ ಜೊತೆ ಎಲ್ಲಾ ನೀವು ಚನ್ನಾಗಿ ಇರುತ್ತೀರಿ ಎಂದರೆ ಸರಿ. ನಿಮ್ಮ ಕಷ್ಟ ಸುಖಗಳನ್ನು ಅವರ ಜೊತೆ ಹಂಚಿಕೊಳ್ಳುತ್ತಿದ್ದೀರಿ ಎಂದರೆ ಸರಿ. ನಿಮ್ಮ ತಾಯಿ ಇದ್ದಾರೆ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಮ್ಮ ತಾಯಿಯೊಂದಿಗೂ ಸಹ ಕಷ್ಟು ಸುಖ ಹಂಚಿಕೊಳ್ಳುತ್ತಿದ್ದೀರಿ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಯಾಕೆ ಹಂಚಿಕೊಳ್ಳುತ್ತಿರಲಿಲ್ಲ ಎಂದರೆ ನಾನು ನನ್ನ ಸ ಂಬಂಧಿಕರಲ್ಲಿ ಮದುವೆ ಆದ್ದರರಿಂದ ಹಂಚಿಕೊಳ್ಳುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬದಲ್ಲಿ ಹೆಣ್ಣು ಮಕ್ಕಳು ಸಂಬಂಧಿಕರು ಇದ್ದಾರಾ

ಎಂದರೆ ಇದ್ದಾರೆ ಎಂದು ನುಡಿಯುತ್ತಾರೆ. ಅವರುಗಳಲ್ಲಿ ಆರೋಪಿ ನನಗೆ ಹೆದರಿಸುತ್ತಿದ್ದಾರೆ ಎಂದು ಹೇಳಲು ತೊಂದರೆ ಇರಲಿಲ್ಲ ಎಂದರೆ ಅವರು ನಮ್ಮ ಮನಯಿಂದ ದೂರ ಇದ್ದರು ಆಗಾಗಿ ಹೇಳಲು ಆಗಲಿಲ್ಲ ಎಂದು ನುಡಿಯುತ್ತಾರೆ. ನೀವು ಫೋನ್ ಬಳಕೆ ಮಾಡುತ್ತೀರಾ ಎಂದರೆ ಆಗ ಮಾಡುತ್ತಿದ್ದೇ ಈಗ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಫೋನ್ ಮುಖಾಂತರ ಆದರೂ ಆರೋಪಿಯು ಹೆದರಿಸುವ ಬಗ್ಗೆ ನಿಮ್ಮ ಸಂಬಂಧಿಕರಿಗೆ ತಿಳಿಸಬಹುದಾಗಿತ್ತು ಎಂದರೆ ತಿಳಿಸಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ಬೆದರಿಕೆ ಹಾಕಿ ಯಾವುದೇ ಹಣ ಹಾಗೂ ಒಡವೆ ಪಡೆದುಕೊಂಡಿಲ್ಲ ಆಗಾಗಿ ನೀವು ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಕುಟುಂಬದವರೆಲ್ಲಾ ಅಡಿಕೆ ವ್ಯವಹಾರವನ್ನು ಮಾಡುತ್ತಾರೆ ಎಂದರೆ ಸರಿ. ಅದರೊಂದಿಗೆ ವ್ಯವಸಾಯವನ್ನು ಮಾಡುತ್ತಾರೆ ಎಂದು ನುಡಿಯತ್ತಾರೆ. ಆರೋಪಿ ಮೊದಲು ನಿಮ್ಮ ಗಂಡನೊಂದಿಗೆ ಅಡಿಕೆ ವ್ಯವಹಾರ ಮಾಡುತ್ತಿದ್ದರು ಆರೋೀಪಿ ನಿಮ್ಮ ಗಂಡನನ್ನು ಬಿಟ್ಟು ಬೇರೆ ಹೊಸದಾಗಿ ಅಡಿಕೆ ವ್ಯಾಪಾರ ಮಾಡಲು ಹೋಗಿದ್ದರಿಂದ ಅದೇ ದ್ವೇಷದಿಂದ ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ಜೊತೆ ವ್ಯವಹಾರ ಮಾಡಿಲ್ಲ, ನನ್ನ ಮಾವನ ಜೊತೆ ವ್ಯವಹಾರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಕುಟುಂಬದವರಿಗೂ ಹಾಗೂ ನಿಮ್ಮ ಕುಟುಂಬದವರಿಗೂ ಅಡಿಕೆ ವ್ಯವಹಾರದ ವಿಚಾರದಲ್ಲಿ ಮಾತುಕತೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಗಂಡನ ಮಾತನ್ನು ಕೇಳಿಕೊಂಡು ಯಾವುದೇ ಹಣ ಹಾಗೂ ಒಡವೆ ಗಳನ್ನು ಆರೋಪಿಗೆ ನೀಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ, ಅದೇ ರೀತಿ ಪೋಲೀಸರು ಯಾವುದೇ ಸ್ಥಳಕ್ಕೆ ಬಂದಿಲ್ಲ, ಯಾವುದೇ ಸ್ಥಳ ಪಂಚನಾಮೆ ಜರುಗಿಸಿಲ್ಲ, ಯಾವುದೇ ವಾಹನ ಬಿಡುಗಡೆ ಅಮಾನತ್ತು ಸಹ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಜೊತೆ ಯಾವುದೇ ಸಲುಗೆಯಿಂದ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**